# ಟಿ.ಇ.ಟಿ. ಪ್ರೌಢಶಾಲಾ ಕಲಾ ಶಿಕ್ಷಕ - 2014

# ಪ್ರಥಮ ಭಾಷೆ - ಕನ್ನಡ

ನೀವು ಜನಪ್ರಿಯರಾಗಬೇಕೆಂದಿರುವಿರಾ? ದಾರಿ ಕಾಣದಾಗಿದೆಯೇ? ಉಪಾಯ ಇಲ್ಲಿದೆ; ಜನರ ವೈಶಿಷ್ಟ್ಯ ಸಾಮರ್ಥ್ಯ ದಕ್ಷತೆಗಳನ್ನು ಗಮನಿಸಿ, ಹೃತ್ಪೂರ್ವಕವಾಗಿ ಆನಂದಿಸಬಲ್ಲಿರಾ? ಅವರನ್ನು ಪ್ರೋತ್ಸಾಹಿಸಬಲ್ಲಿರಾ? ತಾಳ್ಮೆಯಿಂದ ಅವರ ಹಿತಚಿಂತನೆ ಮಾಡಬಲ್ಲಿರಾ? ಅವರಿಗಾಗಿ ದೇವರಲ್ಲಿ ಪ್ರಾರ್ಥಿಸಬಲ್ಲಿರಾ? ಎಂದರೆ ನಿಃಸ್ವಾರ್ಥ ಪ್ರೀತಿಯನ್ನು ನೀಡಬಲ್ಲಿರಾ? ಹೌದು ಎಂದಾದಲ್ಲಿ ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ.

ನೀವು ಸುಲಭವಾಗಿ ಒಳ್ಳೆಯ ಚಿಂತನಶೀಲ ವ್ಯಕ್ತಿಗಳೂ, ಸಂಶೊಧಕರೂ ಆಬೇಕೆಂದಿರುವಿರಾ? ನೀವು ಆರಿಸಿಕೊಂಡ ಅಧ್ಯಯನದ ವಿಷಯವನ್ನು ಮನಸಾರೆ ಪ್ರೀತಿಸಿರಿ. ಆಗ ಎಂಥೆಂಥ ಅದ್ಭುತ ಯೋಚನೆಗಳು ಓಡೋಡಿ ಬರುತ್ತವೆಂದು ನೋಡಿ.

ನೀವು ಆರೋಗ್ಯವಂತರೂ, ಬಲಶಾಲಿಗಳೂ ಆಗಬೇಕೆಂದಿರುವಿರಾ? ಶುಭೇಚ್ಛೆ ಹಾಗೂ ಪ್ರೀತಿಯ ತರಂಗಗಳನ್ನು ನಿಮ್ಮ ಸುತ್ತಮುತ್ತಲಿನ ಜನ ಮಾತ್ರವಲ್ಲ. ಪಶುಪಕ್ಷಿ ಕ್ರಿಮಿಕೀಟ, ತರುವೃಕ್ಷ, ಫಲ, ಪುಷ್ಪಗಳೆಡೆಗೆ . ಎಂದರೆ ನಿಸರ್ಗದೆಡೆ ಹರಿಸಿ. ಆಗ ಇದರ ಪರಿಣಾಮ ನಿಮ್ಮ ಅಂತರ್ಮನಸ್ಸಿನ ಮೇಲಾಗಿ ರಕ್ತದ ಕಣಗಳ ಮೇಲೂ ಸತ್ಪರಿಣಾಮ ಉಂಟಾಗುವುದು! ದ್ವೇಷವನ್ನು ಬೆಳೆಸಿ, ಬಿತ್ತರಿಸಿದಿರಾದರೆ ಶರೀರ ಹಾಗೂ ಮನಸ್ಸು ವಿಷಯುಕ್ತವಾಗುತ್ತದೆ.

ಹೌದು, ಪ್ರೀತಿ ಮಾತ್ರ ಅತ್ಯಂತ ಹಿತಕರ ಹಾಗೂ ಆರೋಗ್ಯವರ್ಧಕ ರಾಸಾಯನಿಕ ಪರಿಣಾಮಗಳನ್ನು ರಕ್ತದಲ್ಲಿ ಉಂಟು ಮಾಡುತ್ತದೆ. ಅಂದ ಮೇಲೆ ನೀವು ಅನುಸರಿಸಬೇಕಾದ ಆದರ್ಶ ಪಥ ಯಾವುದಂದು ಬೇರೆ ಹೇಳಬೇಕೆ?

1. 'ಜನರಿಂದ ಅಪಾರವಾದ ಪ್ರೀತಿಯನ್ನು ಗಳಿಸಿ, ಜನಪ್ರಿಯರಾಗಲು ಮಾಡಬೇಕಾದ ಪ್ರಮುಖ ಕಾರ್ಯ':
   1) ಜನರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು
   2) ಜನರ ಹಿತಚಿಂತನೆಯನ್ನು ಮಾಡುವುದು
   3) ಜನರ ಅಭ್ಯುದಯಕ್ಕಾಗಿ ದೇವರನ್ನು ಪ್ರಾರ್ಥಿಸುವುದು
   4) ಜನರಿಗೆ ನಿಃಸ್ವಾರ್ಥ ಪ್ರೀತಿಯನ್ನು ನೀಡುವುದು
2. ಒಬ್ಬ ಸಂಶೋಧಕನಾಗಬೇಕೆಂಬ ವ್ಯಕ್ತಿಗೆ ಅದ್ಭುತವಾದ ಯೋಚನೆಗಳು ಅವಶ್ಯಕ. ಇಂತಹ ಯೋಚನೆಗಳೊಂದಿಗೆ ಆತನು ಉತ್ತಮ ಸಂಶೋಧಕನಾಗಲು ಮೊದಲು ಹೀಗೆ ಮಾಡಬೇಕು.
   1) ಅಧ್ಯಯನ ವಿಷಯವನ್ನು ಬಲವಾಗಿ ಇಷ್ಟಪಡಬೇಕು
   2) ಅದ್ಭುತವಾದ ಯೋಚನೆಗಳನ್ನು ಮನಸಾರೆ ಪ್ರೀತಿಸಬೇಕು
   3) ಒಳ್ಳೆಯ ಚಿಂತನಶೀಲ ಸಂಶೋಧನೆಗಳನ್ನು ಮಾಡಬೇಕು
   4) ಸಂಶೋಧಕನಾಗಬೇಕೆಂದು ಸದಾ ಯೋಚನಾ ಮಗ್ನನಾಗಬೇಕು
3. ಜಗತ್ತು ಬಲಶಾಲಿಗಳನ್ನು ಗೌರಿವಿಸುತ್ತದೆ. ಆರಾಧಿಸುತ್ತದೆ. ಅಂತಹ ಗೌರವಕ್ಕೆ ಪಾತ್ರರಾಗಲು ಮೂಲವಾಗಿ ಮಾಡಬೇಕಾದ ಕಾರ್ಯ:
   1) ಸುತ್ತಮುತ್ತಲಿನ ಜನರಿಗ ಶುಭೇಚ್ಛೆ ಹಾಗೂ ಪ್ರೀತಿಯನ್ನು ಆಶಿಸುಬೇಕು.
   2)ಪಶುಪಕ್ಷಿ, ಕ್ರಿಮಿಕೀಟಗಳಿಗೆ ದಯೆ ಮತ್ತು ಕರುಣೆಯನ್ನು ತೋರಿಸಬೇಕು
   3) ನಿಸರ್ಗದೆಡೆಗೆ ಒಳ್ಳೆಯ ಹಂಬಲ ಮತ್ತು ಪ್ರೀತಿಯನ್ನು ಪಸರಿಸಬೇಕು
   4) ತರುವೃಕ್ಷ, ಫಲಪುಷ್ಪಗಳಿಗೆ ಪ್ರೀತಿಯ ತರಂಗಗಳನ್ನು ಮುಟ್ಟಿಸಬೇಕು
4. ಅತ್ಯಂತ ಘೋರ ಪರಿಣಾಮವನ್ನುಂಟು ಮಾಡಬಲ್ಲ ದ್ವೇಷವು ಮನುಷ್ಯರಲ್ಲಿ ಬೆಳೆದು, ಚಿಗುರಿದಾಗ ಹೀಗಾಗುತ್ತದೆ.
   1) ಶರೀರ ಹಾಗೂ ಮನಸ್ಸು ನಂಬುಗೊಳ್ಳುತ್ತದೆ
   2) ಶರೀರ ಹಾಗೂ ಮನಸ್ಸು ವಿಷಯಾಸಕ್ತವಾಗುತ್ತದೆ
   3) ಶರೀರ ಬೆಳೆದು ಮನಸ್ಸು ವಿಷಮುಕ್ತವಾಗುತ್ತದೆ
   4) ಶರೀರ ಹಾಗೂ ಮನಸ್ಸಿನಲ್ಲಿ ಮರವಾಗುತ್ತದೆ
5. 'ಮಾನವ ಜನ್ಮ ಬಲು ದೊಡ್ಡದು ಎಂಬ ದಾಸರ ವಾಣಿಯಂತೆ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗ.
   1) ಆರೋಗ್ಯವಂತ ಮತ್ತು ಬಲಶಾಲಿ ವ್ಯಕ್ತಿಗಳಾಗಬೇಕು

2) ಸರ್ವಹಿತವಾದ ಮತ್ತು ನಿಃಸ್ವಾರ್ಥ ಪ್ರೀತಿಯುಳ್ಳವರಾಗಿರಬೇಕು

3) ಚಿಂತನ ಶೀಲರಾಗಿ ಪರಹಿತ ಚಿಂತನೆ ಮಾಡುವವರಾಗಬೇಕು

4) ಶರೀರ ಹಾಗೂ ಮನಸ್ಸನ್ನು ವಿಷಮುಕ್ತ - ಗೊಳಿಸಿದವರಾಗಬೇಕು

6. ತಾನು ಆದರ್ಶವಾಗಿ ಬಾಳಬೇಕೆಂಬ ಹಂಬಲ ಹೊಂದಿರುವ ಪ್ರತಿಯೊಬ್ಬ ಮನುಷ್ಯನು ಅನುಸರಿಸಬೇಕಾದ ಆದರ್ಶಪಥ:

1) ಜನಪ್ರಿಯ ಪಥ

2) ಆನಂದ ಪಥ

3) ಪ್ರೀತಿಯ ಪಥ

4) ನಿಃಸ್ವಾರ್ಥ ಪಥ

7. ಈ ಕೆಳಗಿನವುಗಳಲ್ಲಿ ದ್ವಿರುಕ್ತಿ ಜೋಡುನುಡಿ ಮತ್ತು ಕ್ರಿಯಾಪದಗಳು ಅನುಕ್ರಮವಾಗಿರುವುದು

1) ಕ್ರಿಮಿಕೀಟ, ಎಂಥೆಂಥಗಳಿಸಬಲ್ಲಿರಿ

2) ಎಂಥೆಂಥ, ಪಶುಪಕ್ಷಿ, ಸತ್ಪರಿಣಾಮ

3) ತರುವೃಕ್ಷ, ಓಡೋಡಿ, ಉಂಟಾಗುವುದು

4) ಓಡೋಡಿ, ಫಲಪುಷ್ಪ, ಮಾಡಬಲ್ಲಿರಿ

8. ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ ಈ ಹೇಳಿಕೆಯಲ್ಲಿರುವ ಕ್ರಿಯಾಪದವು ಈ ರೂಪದಲ್ಲಿದೆ

1) ನಿಷೇದಾರ್ಥಕ ರೂಪ

2) ವಿದ್ಯರ್ಥಕ ರೂಪ

3) ನಿರ್ದೇಶನಾತ್ಮಕ ರೂಪ

4) ಸಂಭವನಾರ್ಥಕ ರೂಪ

ಕಿನ್ನರ ಕಿಂಪುರುಷನ ನೌಕೆಗಳಂತೆ
ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ
ನೂರೊಂದು ಕಡೆಗೆ ತೇಲುತ್ತಿಹುದು ನೋಡಾ!
ಬೆಣ್ಣೆ ಕಡೆದ ಮಜ್ಜಿಗೆಯಂತೆ
ಹುಟ್ಟು ಕಡೆದು ನೀರು ಅಟ್ಟಿಸುತಿಹುದು ನೋಡಾ!
ತಪತಪನೆ ಕಾಯ್ದು ಕೋಟಿ ಸೂರ್ಯರಂತೆ
ಕಣ್ಣು ಕುಕ್ಕಿಸುವುದು ನೋಡಾ ಸಾಗರವು!
ಹೆಡೆಯಲ್ಲಿ ಪುಷ್ಪರಾಗವಿಹ ಕಾಳಸರ್ಪಗಳಂತೆ
ಸಾಗಿಹುದು ನೋಡ ಸಾವಿರ ತೆರೆಗಳ ವೈಭವವು!
ಹಚ್ಚ ಹಸಿರಿತ್ತು ಹಿಂದೂ ಮಹಾ ಸಾಗರದ ಬಣ್ಣ
ಕಪ್ಪು ಹಸಿರಿತ್ತು ಮತ್ತೆ !
ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು
ಮುಂದೆ ಬಂದಿಹುದು ಕೆಂಪು ಸಮುದ್ರವೊಂದು
ನಿನ್ನ ಬಣ್ಣವಾವುದು ಸಮುದ್ರರಾಜ?
ಸಪ್ತವರ್ಣದ ಇಂದ್ರದನುಸ್ಸನ್ನು ಹಿಡಿದು
ಆಕಾಶರಾಜನ ಸರಿಗಟ್ಟಿದೆ ನೀನು.
ಚಣಕೊಮ್ಮೆ ಬಣ್ಣವ ಬದಲಿಸಿ ಚೆಲುವಿಕೆಯನಾಂತು
ಭೂದೇವಿಯನು ಪಾತಾಳಕೆ ಮೆಟ್ಟಿದೆ ನೀನು!
ಮುಗಿಲಿಗಿಂತ ಮಿಗಿಲು ಸಾಗರದ ನೀಲಿ!
ಸಾಗರದ ತುದಿ ತಟ್ಟಿ ಮುಗಿಲೆಲ್ಲ ನೀಲಿಯಾಗಿಹುದು
ಮುಗಿಲನಂತತೆಯಲ್ಲ ಮುನ್ನೀರ ಗರ್ಭಪಿಂಡ!
ಮೋಡಗಳೆಂಬ ಓಡುಗಳು ಬಾಂದಳದ ತೇಲುವಲ್ಲಿ
ಹಕ್ಕಿಯೆಂಬ ಚಿಕ್ಕಿ ಮಿನುಗಿದವು ಕಡಲಿನೊಡಲ ಮೇಲ್ಗಡೆಗೆ
ಗಾಳಿಯಲಿ ರೆಕ್ಕೆ ಬೀಸುತಿದೆ ಪಕ್ಷಿ ಗಣವು
ಈಸುತಿದೆ ಗಾಳಿ, ನೀರಿನಲ್ಲಿ ರೆಕ್ಕೆ ಬಡಿದು!
ನೆಲೆ, ಗಾಳಿ, ಉರಿ, ಮುಗಿಲು
ಪೆಡಂಭೂತಗಳಿವು ನಾಲ್ಕು
ಈ ಮಹಾಭೂತಗಳ ನುಂಗಿ ನೀರ್ಕುಡಿಯುತ್ತ
ಮತ್ತಮದಗಜದಂತೆ ಕ್ರೀಡಿಸುತ ನಿಂತ ಪಂಚಾನನ!
ನಿನ್ನೆದುರು ನರನೆಂಬ ಪಿಳ್ಳಿ ಬರಿ ನೀರ್ಗುಳ್ಳಿ
ಕೆರಳದಿರು! ಕರುಣಿಸು! ಶರಣು! ಶರಣು!

9. ಬಲು ಪ್ರಕಾಶಮಾನವಾದ ವಸ್ತುಗಳನ್ನು ದೃಷ್ಟಿನೆಟ್ಟು ನೋಡಲು ಕಷ್ಟ. ಆದರೆ ಸಾಗರವನ್ನು ನೋಡಿದಾಗ ಕಣ್ಣುಗಳು ಕುಕ್ಕಲು ಕಾರಣ

1) ಸಾಗರವು ಕೋಟಿ ಸೂರ್ಯನಂತೆ ಪ್ರಕಾಶಮಾನ-ವಾಗಿರುವುದು

2) ಸಾಗರದ ನೀರಿನಲ್ಲಿ ಸೂರ್ಯನು ಪ್ರತಿಬಿಂಬಿತ-ವಾಗುತ್ತಿರುವುದು

3) ಹುಟ್ಟು ಕಡೆದು ಸಮುದ್ರದ ನೀರನ್ನು ಅಟ್ಟಿಸುತ್ತಿರುವುದು

4) ಸಮುದ್ರದ ಮೇಲೆ ಬುರುಗು ತೇಲಾಡುತ್ತಿರುವುದು

10. ಆಕಾಶರಾಜನನ್ನು ಸರಿಗಟ್ಟಿದ ಸಮುದ್ರರಾಜನು ಹಿಡಿದಿರುವ ಬಿಲ್ಲು ಹೀಗಿದೆ:

1) ಸಪ್ತವರ್ಣಗಳಿಂದ ಕೂಡಿದ ಇಂದ್ರಧನಸ್ಸಿನಂತೆ ಇದೆ

2) ಹಚ್ಚ ಹಸಿರು, ಕಪ್ಪುಬಣ್ಣಗಳಿಂದ ಕೂಡಿದೆ ಹಿಂದೂ ಮಹಾಸಾರಗದಂತಿದೆ.

3) ಕರಿನೀಲಿ, ಕೆಂಪುಬಣ್ಣಗಳನ್ನು ಹೊಂದಿದ ಅರಬ್ಬೀ ಸಮುದ್ರದಂತಿದೆ

4) ಏಳು ಬಣ್ಣಗಳಿಂದ ಅಲಂಕೃತಗೊಂಡಿರುವ ಕಾಮನಬಿಲ್ಲಾಗಿದೆ.

11. ಕವಿಯ ಕಲ್ಪಿನೆಯಲ್ಲಿ ಆಕಾಶವು ನೀಲಿಯಾಗಿರುವುದು ಈ ಕಾರಣದಿಂದ

1) ಸಾಗರದ ನೀಲಿಯು ಮುಗಿಲಿಗಿಂತ ಮಿಗಿಲಾಗಿ-ರುವುದು

2) ಸಾಗರದ ನೀರಿನಲ್ಲಿ ಪ್ರತಿಬಿಂಬಿತವಾಗಿ ನೀಲಿ-ಯಾಗಿರುವುದು

3) ಬಾಗಿದ ಆಕಾಶವು ಸಾಗರದ ಅಂಚನ್ನು ಸ್ಪರ್ಶಿಸಿ ಆಗಿರುವುದು

4) ಸಹಜವಾಗಿಯೇ ಆಕಾಶವು ನೀಲಿ ಬಣ್ಣವನ್ನು ಹೊಂದಿರುವುದು

12. ಸೊಕ್ಕಿದ ಆನೆಯಂತೆ ಚೆಲ್ಲಾಟವಾಡುತ್ತಿರುವ ಪಂಚಾನನ ಎಂದರೆ ಇದು:

1) ಮಹಾಭೂತಗಳನ್ನು ನುಂಗಿ ನೀರು ಕುಡಿದಿರುವ ಸಾಗರ

2) ಬೃಹದಾಕಾರವಾಗಿ ನರ್ತಿಸುತ್ತಿರುವ ಸಾಗರದ ಅಲೆಗಳು

3) ಅಲೆಗಳ ತಳ್ಳಾಟದಿಂದ ಉಂಟಾಗಿರುವ ನೀರುಗುಳ್ಳೆಗಳು

4) ನೆಲ, ಗಾಳಿ, ಉರಿ, ಮುಗಿಲು, ಸಮುದ್ರ ಈ ಐದು ಭೂತಗಳು

13. ಮನಮೋಹಕ ಮತ್ತು ಅದ್ಭುತವಾದ ಸಾಗರದ ಅಲೆಗಳ ವೈಭವವು ಕವಿಯ ಕಲ್ಪನೆಗೆ ಕಾಣಿಸಿದ್ದು ಹೀಗೆ:

1) ಸಮುದ್ರದ ತುಂಬ ತೇಲುತ್ತಿರುವ ಬೆಳ್ಳಿಯ ಬುರುಗಿನ ರಥಗಳಂತೆ

2) ಬಾಂದಳದಿ ಹಕ್ಕಿಗಳಂತೆ ಸಾಗುತ್ತಿರುವ ಬಿಳಿಯ ಮುಗಿಲುಗಳಂತೆ

3) ಮತ್ತೇರಿ ಸೊಕ್ಕಿ ಮನಬಂದಂತೆ ಚೆಲ್ಲಾಟ- ವಾಡುತ್ತಿರುವ ಆನೆಗಳಂತೆ

4) ಹೆಡೆಯಲ್ಲಿ ಪುಷ್ಪರಾಗವನ್ನು ಹೊಂದಿರುವ ಕಾಳಸರ್ಪಗಳಂತೆ

14. 'ಕಿನ್ನರ ಕಿಂಪುರುಷರ ನೌಕೆಗಳಂತೆ ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ' ಎಂಬ ಹೋಲಿಕೆಯಲ್ಲಿ ಉಪಮೇಯ ಅನುಕ್ರಮವಾಗಿ ಇಂತಿವೆ.

1) ಕಿನ್ನರ ಕಿಂಪುರುಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ನೌಕೆ

2) ಶರಧಿಯ ಮೇಲೆ ತೇಲುತ್ತಿರುವ ನೌಕೆ, ಕಿನ್ನರ ಕಿಂಪುರುಷರ ರಥಗಳು

3) ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ, ಕಿನ್ನರ ಕಿಂಪುರುಷರ ನೌಕೆಗಳು

4) ಕಿನ್ನರ ಕಿಂಪುರುಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ

15. 'ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು ಮುಂದೆ ಬಂದಿಹುದು ಕೆಂಪು ಸಮುದ್ರವೊಂದು' ಇಲ್ಲಿಯ ಪದ್ಯದ ಸಾಲುಗಳಲ್ಲಿ ಅಡಿಗೆರೆ ಎಳೆದಿರುವ

1) ಕರ್ಮಧಾರೆಯ ಮತ್ತು ಕರ್ಮಧಾರೆಯ

2) ದ್ವಂದ್ವ ಮತ್ತು ತತ್ಪುರುಷ

3) ತತ್ಪುರುಷ ಮತ್ತು ತತ್ಪುರುಷ

4) ಬಹುವ್ರೀಹಿ ಮತ್ತು ಕರ್ಮಧಾರಯ

16. ಭಾಷಾ ಕಲಿಕೆಯ ಅನುಕ್ರಮಣಿಕೆ ತತ್ವದನ್ವಯ ಸರಿಯಾದ ಕಲಿಕೆಯ ರೀತಿ ಹೀಗಿರುತ್ತದೆ'

1) ಬಿಡಿ ಪದಗಳು ಮೊದಲು ನಂತರ ಪೂರ್ಣ ವಾಕ್ಯಗಳ ಕಲಿಕೆ

2) ಮಾತುಗಾರಿಕೆಯ ಕೌಶಲದ ನಂತರ ಓದುವ ಕೌಶಲದ ಕಲಿಕೆ

3) ಮೌನ ಓದಿನ ನಂತರ ಬಾಯ್ದೆರೆ ವಾಚನದ ಕಲಿಕೆ

4) ಸರಳದಿಂದ ಸಂಯುಕ್ತ, ಅಪರಿಚಿತದಿಂದ ಪರಿಚಿತ ಪದಗಳ ಕಲಿಕೆ

17. ಭಾಷಾ ಕಲಿಕೆಯ ಆರಂಭ ಮತ್ತು ಅದು ಬಲ ಗೊಳ್ಳುವುದು ಅನುಕ್ರಮವಾಗಿ ಭಾಷಾ ಭೋಧನೆಯ ಈ ತತ್ವಗಳಿಂದ

1) ಸಿದ್ಧತಾ ತತ್ವ ಅಭ್ಯಾಸ ತತ್ವ

2) ಅನುಕರಣ ತತ್ವ, ಪುನರ್ಬಲನ ತತ್ವ

3) ಸಿದ್ದತಾ ತತ್ವ, ಅನುಕರಣ ತತ್ವ

4) ಅನುಕರಣ ತತ್ವ, ಅಭ್ಯಾಸ ತತ್ವ

18. 'ಒಬ್ಬ ಸಾಮಾನ್ಯ ವಿದ್ಯಾರ್ಥಿಯು ಪರಿಣಾಮಕಾರಿ ಕಲಿಕಾ ಪ್ರಕ್ರಿಯೆಯ ನಂತರ, ಆ ಪ್ರಕ್ರಿಯೆಗೆ ಸಂಬಂಧಿಸಿದ ಸಾಮಾನ್ಯ ಅಂಶಗಳಿಗೆ ಆತ ಸಮರ್ಪಕವಾಗಿ ಪ್ರತಿಕ್ರಿಯಿಸುತ್ತಿಲ್ಲ ಎಂದರೆ ಅದಕ್ಕೆ ಪ್ರಮುಖ ಕಾರಣ'

1) ಆತನು ಪ್ರಮುಕ ಅಂಶಗಳನ್ನು ಪಟ್ಟಿಮಾಡಿ-ಕೊಂಡಿಲ್ಲ

2) ಆತ ತನ್ನನ್ನು ಚಟುವಟಿಕೆಗಳಲ್ಲಿ ತೊಡಗಿಸಿ-ಕೊಂಡಿಲ್ಲ

3) ಆತ ವಿಷಯವನ್ನು ಸರಿಯಾಗಿ ಆಲಿಸಿಲ್ಲ

4) ಆತನಿಗೆ ಸ್ಪಷ್ಟವಾಗಿ ಓದಲು ಗೊತ್ತಿಲ್ಲ

19. ಈ ಹೇಳಿಕೆಗಳಲ್ಲಿ ಉತ್ತಮ ಮಾತುಗಾರಿಕೆಯ ಪ್ರಮುಖ ಲಕ್ಷಣಗಳು ಇವು:

ಎ) ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ಸರಾಗವಾಗಿ ಮಾತನಾಡುವುದು

ಬಿ) ಮಾತಿನ ದಾಟಿಯಲ್ಲಿ ಏರಿಳಿತದೊದಿಗೆ ಮಾತ-ನಾಡುವುದು

ಸಿ) ಭಾವಪೂರ್ಣವಾಗಿ ಏಕತಾನತೆಯಿಂದ ಮಾತ-ನಾಡುವುದು

ಡಿ) ಅರ್ಥಪೂರ್ಣವಾಗಿ ವ್ಯಾಕರಣಬದ್ಧವಾಗಿ ಮಾತ-ನಾಡುವುದು

1) ಎ, ಬಿ ಮತ್ತು ಡಿ 2) ಎ, ಸಿ ಮತ್ತು ಡಿ

3) ಬಿ, ಸಿ ಮತ್ತು ಡಿ 4) ಎ, ಬಿ ಮತ್ತು ಸಿ

20. 'ಕ್ರಿಯಾತ್ಮಕ ವ್ಯಾಕರಣ ಬೋಧನೆಯ ಮುಖ್ಯ ಲಕ್ಷಣ ಇದಾಗಿದೆ

1) ಭಾಷೆಗಿಂತ ಮೊದಲು ವ್ಯಾಕರಣದ ಕಲಿಕೆ

2) ಪ್ರತ್ಯೇಕವಾಗಿ ಶಾಸ್ತ್ರೀಯ ರೀತಿಯ ಕಲಿಕೆ

3) ಭಾಷೆಯ ಜೊತೆಯಲ್ಲಿಯೇ ಪ್ರಯೋಗದ ಮೂಲಕ ವ್ಯಾಕರಣ ಕಲಿಕೆ

4) ವ್ಯಾಕರಣ ಸೂತ್ರಗಳ ಅನ್ವಯದಿಂದ ಭಾಷೆಯ ಕಲಿಕೆ

21. ಬಹುಭಾಷಾ ಮಕ್ಕಳಿರುವ ತರಗತಿಯಲ್ಲಿ ಭಾಷಾ ಶಿಕ್ಷಕ ಹೊಂದಿರಬೇಕಾದ ಅಪೇಕ್ಷಿತ ಧೋರಣೆ ಇರಬೇಕಾಗಿದ್ದು ಹೀಗೆ.

1) ಬಹುಭಾಷಾ ವಿದ್ಯಾರ್ಥಿಗಳು ಭಾಷಾ ಬೋಧನೆಗೆ ಒಂದು ತೊಡಗು.

2) ಬಹುಭಾಷಾ ತರಗತಿಯ ಭಾಷಾ ಕಲಿಕೆ ಸಂಪನ್ಮೂಲ ಎಂದು ಭಾವಿಸುವುದು

3) ಬಹುಭಾಷಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬೋಧನೆ ಮಾಡುವುದು

4) ವಿವಿಧ ಭಾಷೆಗಳಿಗೆ ಪ್ರತ್ಯೇಕ ಬೋಧನಾ ವ್ಯವಸ್ಥೆ ಮಾಡುವುದು

22. 'ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಘಟಕಗಳನ್ನು ಅಗತ್ಯ ಸಿದ್ಧತೆಯೊಂದಿಗೆ ಈ ರೀತಿಯಾಗಿ ಅನುಕೂಲಿಸುವುದು ಹೆಚ್ಚು ಸೂಕ್ತ

1) ವೈವಿಧ್ಯ ಚಟುವಟಿಕೆಗಳ ಮೂಲಕ

2) ವಿವಿಧ ಬೋಧನಾ ವಿಧಾನ ಬಳಸಿ

3) ಸಾಕಷ್ಟು ಕಲಿಕಾ ಸಾಮಗ್ರಿಗಳೊಂದಿಗೆ

4) ತರತರದ ಸನ್ನಿವೇಷಗಳಲ್ಲಿ

23. 'ಭಾಷೆಯ ಮೇಲಿನ ಪ್ರಭುತ್ವ ಸಾಧನೆಯೆಂದರೆ ಮುಖ್ಯವಾಗಿ ಇವುಗಳನ್ನು ಹೊಂದುವುದೇ ಆಗಿದೆ'

1) ಭಾಷಾ ಬಳಕೆಯ ವಿಶೇಷ ಸಾಮರ್ಥ್ಯಗಳು

2) ಭಾಷಾ ಕಲಿಕೆಯ ವಿವಿಧ ಸಾಮರ್ಥ್ಯಗಳು

3) ಭಾಷಾ ಬಳಕೆಯ ಮೂಲ ಕೌಶಲಗಳು

4) ಭಾಷಾ ಬಳಕೆಯ ವಿವಿಧ ಕೌಶಲಗಳು

24. ಭಾಷಾ ಕಲಿಕೆಯಲ್ಲಿ ನೈಪುಣ್ಯತೆ ಸಾಧಿಸಲು ಈ ರೀತಿಯ ಕಲಿಕೆಯು ಸ್ವಷ್ಟತೆ ಮತ್ತು ಪರಿಪೂರ್ಣತೆಯನ್ನು ಒದಗಿಸಬಲ್ಲುದು

1) ಸ್ವಯಂ ಕಲಿಕೆ 2) ಗುಂಪು ಕಲಿಕೆ

3) ಸಂಘಟಿತ ಕಲಿಕೆ 4) ಸಾಂದರ್ಭಿಕ ಕಲಿಕೆ

25. 'ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಆಶಯದಲ್ಲಿ ಮೌಲ್ಯಮಾಪನವು ಹೀಗಿರಬೇಕೆಂಬ ಅಂಶವನ್ನು ಒತ್ತಿ ಹೇಳಿದೆ

1) ಬೋಧನಾ ವಿಧಾನ

2) ಅರ್ಹತಾ ಮಾಪನ

3) ಪರೀಕ್ಷಾ ವಿಧಾನ

4) ಕಲಿಕಾ ಸಾಧನ

26. 'ಮಾತನಾಡುವ ಕೌಶಲಕ್ಕೆ ಸಂಬಂಧಿಸಿದಂತೆ ಮೌಲ್ಯ-ಮಾಪನ ಕಾರ್ಯದಲ್ಲಿ ಈ ಚಟುವಟಿಕೆಗಳು ಹೆಚ್ಚು ಪರಿಣಾಮಕಾರಿ:

1) ಸಂದರ್ಶನ, ಅಭಿನಯ, ಸಂಭಾಷಣೆ, ಚರ್ಚೆ

2) ಆಶುಭಾಷನ, ಸಂದರ್ಶನ, ಚರ್ಚೆ, ಸಂಭಾಷಣೆ

3) ಚರ್ಚೆ, ಆಶುಭಾಷಣ, ಸಂದರ್ಶನ, ಯೋಜನೆ

4) ಸಂಭಾಷಣೆ, ಸಂದರ್ಶನ, ಗುಂಪುಕಾರ್ಯ, ಆಶುಭಾಷಣ